Sri H. C. LINGA REDDY.— Has it come to the notice of Government that the Rural Industrialisation Scheme Department is only issuing loans and not doing anything else?

***Sri H. M. CHANNABASAPPA.**—The object of the Rural Industrialisation Scheme is not to start industries as Government industries.

Sri H. C. LINGA REDDY.— My question is: is it the object of the Scheme merely to issue loans?

Sri H. M. CHANNABASAPPA.—The object of the Schme is adumbrated in answer (*e*).

Sri H. C. LINGA REDDY.—Has it come to the notice of Government that except issuing loans this Department is not doing anything else?

Sri H. M. CHANNABASAPPA.—This Department is doing something more than the mere issuing of loans. We have been collecting statistics in the country and we have been enrolling people under the co-operatives so that they may all come under the scheme and obtain the help that the scheme could give.

Mr. SPEAKER.—The same question was put and answers were elicited.

Soap Agency

Q.—59. **Sri N. C. NAGAIAH REDDY** (Gauribidanur).—

Will the Government be pleased to state :—

(*a*) (i) when the period of Soap Agency expired after 1951;

(ii) who were the agents then;

(iii) the percentage of commission allowed to them;

(*b*) when the tenders or quotations were called for after the expiry of the previous agencies;

(*c*) (i) how long these tenders were pending settlement;

(ii) the reasons for delay in disposing of the tenders;

(*d*) whether any one of these tenders was accepted in the stipulated time;

(*e*) whether any Committee was appointed to assist in the disposal of these tenders;

(*f*) the persons who are given the present agencies with areas of operation and the rate of commissions allowed?

A.—**Sri H. M. CHANNABASAPPA** (Minister for Industries).—

(*a*) (i) On 31st December 1953 and continued thereafter from time to time till 30th September 1955.

(ii) (1) M/s. K. S. Gowder & Co., for Madras Area.

(2) M/s. Deshamudre & Sons, for Mysore and Coorg Area.

(3) M/s. Amritlal Ojha & Co., for Bengal Area.

(4) M/s. Associated Sales Corporation for Bombay.

(5) M/s. Supsande & Bros., for Madhya Pradesh.

(iii) 8 per cent in the aggregate (5½ per cent Agency Commission and 2½ per cent Dealers' Discount).

(*b*) 1st time—November 1953.
2nd time—April 1954.

(*c*) (i) About one year and six months.

(ii) The matter had to be considered first by the Board of Management of Industrial Concerns and then by Government. The number of applicants was also large (about 300).

(*d*) No time for acceptance was stipulated in the tender.

(*e*) No.

(*f*) Messrs.—

1. Deshamudre & Sons, Bank of Mysore Buildings, Avenue Road, Bangalore City.	Mysore North (comprising Bangalore, Kolar, Chitaldrug, Tumkur and Bellary Districts).
2. K. S. Gowder & Co., 'Vijaya Bhavan', Subedar Chattram Road, Bangalore-2.	Madras and Travancore-Cochin States.
3. Surya Agencies, 67, Kumara Park West Extension, Bangalore-3.	Hyderabad and Andhra States.

	Messrs.	
4.	Mysore Commercial Corporation, 'Mukunda Nivas', Sion, Bombay-22.	Bombay City.
5.	B. Kenchappa & Co., General Merchants and Commission Agents, P. B 45, Santhepet, Mysore.	Bombay South (comprising Poona and other districts of Bombay Province, South of Poona).
6.	M. Ramaswamy Reddy & Co., No. 8, Venkatappa Street, Chikmavalli, Bangalore-2.	Madhya Pradesh and Madhya Bharat States.
7.	Murthy Agencies, No 5, First Floor, Sri Krishnarajendra Market, Bangalore-2.	West Bengal, Bihar, Orissa and Assam.
8.	S. M. Munivenkatappa, M.A., I. V. Street, Tigalarpet, Bangalore-2.	Uttar Pradesh.
9.	S. Dhondusa Dhaktappa & Bros, 167, Subedar Chattram Road, Bangalore-2.	Delhi, East Punjab and Kashmir States.
10.	K. N. Iyanna Setty, Mandi Merchant and Contractor, Chamarajapet Bangalore City.	Ceylon.
11.	Mysore South	Selection of Agents for these areas has not yet been finalised.
12.	Bombay North	

Rate of Commission :—Agents' Commission 4 per cent *plus* Dealers' Discount 2 per cent.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಎರಡನೆಯ ಟೆಂಡರುಗಳನ್ನು ಕರೆದರೆಂದು ಹೇಳಿದ್ದೀರಲ್ಲಾ, ಏಕೆ ?

*ಶ್ರೀ ಎಚ್. ಎಂ. ಚೆನ್ನಬಸಪ್ಪ.—ಒಂದು ಸಲ ಟೆಂಡರುಗಳನ್ನು ಕರೆದೆವು. ಸುಮಾರು 72 ಟೆಂಡರುಗಳು ಬಂದವು. ಆ ಟೆಂಡರುಗಳಲ್ಲಿ ಎಲ್ಲವೂ ಕೂಡ ಏನೇನು ವಿಷಯಗಳನ್ನು ಕೇಳಲಾಗಿತ್ತೋ ಅವುಗಳನ್ನು ಸೂಚನೆ ಮಾಡದಿದ್ದ ಕಾರಣ ಅವು ಕಾನೂನುಬದ್ಧವಾಗಿರಲಿಲ್ಲ. ಆದ್ದರಿಂದ ಅವನ್ನು ವಜಾಮಾಡಿ ಆ ಮೇಲೆ ಅರ್ಜಿಗಳನ್ನು ಕರೆದೆವು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಎರಡನೆಯ ಸಲ ಅರ್ಜಿಗಳು ಬಂದಿದ್ದರಲ್ಲಿ ಎಷ್ಟು ಪರ್ಸೆಂಟ್ ಕಮಿಷನ್ನಿನ ಮೇಲೆ ಕೆಲಸಮಾಡುವುದಾಗಿ ಹೇಳಿ ತಿಳಿಸಿತ್ತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗಲ್ಲ. ಅವರು ಎಷ್ಟು percentage ಮೇಲೆ ಸಾಮಾನ್ಯವಾಗಿ ಕೆಲಸಮಾಡುವುದಕ್ಕೆ ಸಿದ್ಧವಾಗಿರುತ್ತಾರೆಂಬುದನ್ನು ತಿಳಿಸಬೇಕೆಂದು ನಾವು ಬರೆದಿದ್ದೆವು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಕೆಲವು ಪ್ರದೇಶಗಳಿಗೆ ನೀವೀಗ ಕೊಟ್ಟಿರತಕ್ಕ ಕಮಿಷನ್ನಿಗಿಂತಲೂ ಕಡಮೆಯಾಗಿಯೇ ಕಮಿಷನ್ ತೆಗೆದುಕೊಂಡು ಸಮರ್ಪಕವಾಗಿ ಕೆಲಸ ಮಾಡುತ್ತೇವೆಂದು ಹೇಳಿ ಅರ್ಜಿ ಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಟೀಸ್. ಯಾವಯಾವ ಪ್ರದೇಶದಿಂದ ಆ ರೀತಿ ಕೊಟ್ಟಿದೆಯೆಂದು ಹೇಳುವುದಕ್ಕೆ ನೋಟೀಸ್ ಬೇಕು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ನೀವು ಜನರಲ್ಲಾಗಿ ಟೆಂಡರು ಕರೆದರಲ್ಲಾ, ಆಗ್ಗೆ ಯಾವ ಕಮಿಷನ್ ಮೇಲೆ ಕೆಲಸಮಾಡುತ್ತೇವೆಂದು ಹೇಳಿ ತಿಳಿಸಿರುವ ಅರ್ಜಿಗಳು ನಿಮ್ಮ ಫೈಲ್‌ನಲ್ಲಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಫೈಲ್‌ನಲ್ಲಿದೆ ; ಇಲ್ಲವೆಂದು ಹೇಳಲಿಲ್ಲ. ಅದನ್ನು ನೋಡಿ ಹೇಳುವುದಕ್ಕೆ ನೋಟೀಸ್ ಬೇಕು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಶೇಕಡ 4ರ ಮೇಲೆ ಕೆಲಸ ಮಾಡುತ್ತೇವೆಂದು ಹೇಳಿ ಒಂದು ಅರ್ಜಿ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಂದಿರಬಹುದು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಹಾಗಿರುವಾಗ ಶೇಕಡ 4 ಕೊಟ್ಟಿರುವವರನ್ನು ಬಿಟ್ಟು ಶೇಕಡ 6 ಕೊಟ್ಟಿರುವವರಿಗೇಕೆ ಕೊಟ್ಟಿರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬರೀ 4% ಎಂದು ಹೇಳಿ ಕಡಮೆ ಕಮಿಷನ್ನಿನ ಮೇಲೆ ಕೆಲಸವಾಡುವುದಾಗಿ ಹೇಳುವುದೇ ಮುಖ್ಯವಲ್ಲ. ಇನ್ನೂ ಅನೇಕ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ತೀರ್ಮಾನಮಾಡಬೇಕಾಗುತ್ತದೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—11-12ನೆಯ ಪಟಂನಲ್ಲಿ ಸೂಚಿಸಿರುವ ಏಜೆನ್ಸಿಗಳು ಫೈನಲೈಸ್ ಆಗಿಲ್ಲವೆಂದು ಹೇಳಿದ್ದೀರಲ್ಲಾ, ಈ ಎಲ್ಲಾ ಅರ್ಜಿಗಳೂ ಬಂದಿದ್ದಾಗ, ಆ ಅರ್ಜಿಯೂ ಬಂದಿರಲಿಲ್ಲವೇ

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಂದಿತ್ತು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಅದೇನಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಯಾವಯಾವ ಷರತ್ತುಗಳನ್ನು ಸೂಚಿಸಿದ್ದೆವೋ ಆ ಷರತ್ತುಗಳಿಗೆ ಅವರು ಒಪ್ಪಲಿಲ್ಲ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಎರಡನೆಯ ಸಾರಿ ಅವರು ಕೊಟ್ಟಾಗ ಅದನ್ನು reject ಮಾಡಿರುವುದು ನಿಜವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವುದನ್ನು ?

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಮೈಸೂರು ಸೌತ್ ವಿಷಯದಲ್ಲಿ ಬಂದದ್ದನ್ನು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೈಸೂರು ಸೌತ್‌ಗೆ ಯಾರು ಅಪ್ಲಿಕೇಷ್ಷ ಕೊಟ್ಟಿದ್ದರೋ ಜ್ಞಾಪಕ ವಿಲ್ಲ. ಅಪ್ಲಿಕೇಷ್ಷಗಳೇನೋ ಬಂದಿದ್ದವು. ಅವನ್ನು ಪರಿಶೀಲನೆ ಮಾಡಿ ಒಂದು ತಾರೀಖನ್ನು ಗೊತ್ತುಮಾಡಿ ಕರೆಸಿಕೊಂಡು ಇಂಥಿಂಥ ಷರತ್ತುಗಳಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆವು, ಅದರಮೇಲೆ ಅವರು ಮುಂದೆ ಬರಲಿಲ್ಲ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಈ ಸೌತ್‌ಗೆ Earnest Moneyಯನ್ನು ಕೂಡ ಕೊಡದೆ, ಸರ್ಕಾರದಲ್ಲಿಯೂ ಸಹ ಅರ್ಜಿ ಹಾಕದವರೊಬ್ಬರಿಂದ ಸರ್ಕಾರದವರ ಶಿಫಾರಸ್ಸಿನ ಮೇಲೆ ಬಂದಿರುವ ಅರ್ಜಿಯೊಂದು ತಮ್ಮ ಮುಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇನ್ನೂ ಶಿಫಾರಸ್ಸಾಗಿ ಅಂಥ ಯಾವ ಅರ್ಜಿಯೂ ಬಂದಿಲ್ಲ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—Finalise ಆಗಿಲ್ಲವೆಂದು ಹೇಳಿದರಲ್ಲಾ, ಅವರ ಅರ್ಜಿಯನ್ನೇ ನಾನು ಹೇಳುತ್ತಿರುವುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾರು ತಮ್ಮ ದೃಷ್ಟಿಯಲ್ಲಿದ್ದಾರೆಂಬುದನ್ನು ಹೇಳಿದರೆ ಹೇಳುತ್ತೇನೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಮೈಸೂರು ಸೌತ್‌ಗೆ ಯಾರು ಅರ್ಜಿ ಹಾಕಿದ್ದಾರೆಂಬುದನ್ನು ನಾನು ಹೇಳಬೇಕೇ ಅಥವಾ ತಾವು ಹೇಳಬೇಕೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೈಸೂರು ಸೌತ್‌ಗೆ ಎಷ್ಟೋ ಜನ ಅರ್ಜಿ ಕೊಟ್ಟಿರಬಹುದು. ಅವುಗಳಲ್ಲಿ ಯಾರ ಅರ್ಜಿ ಮಂಜೂರಾಗಿದೆಯೆಂದು ಹೇಳಿದೆ. ಅವರು ಮುಂದೆ ಬರಲಿಲ್ಲವಾದ್ದರಿಂದ ತೆಗೆದುಕೊಳ್ಳಲಾಗಲಿಲ್ಲ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಅವರು ಯಾರು ?

ಶ್ರೀ ಎಚ್.ಎಂ. ಚನ್ನಬಸಪ್ಪ.—ಅವರು "ಮೈಸೂರು ಇಂಡಸ್ಟ್ರಿಯಲ್ ನಪ್ಲೈಸ್ ಲಿಂಗಪ್ಪನಾಯರ್ ಸ್ಟ್ರೀಟ್ ಜಿ. 7. ಮದ್ರಾಸ್." ಎಂಬ ಕಂಪೆನಿಯವರು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಅದರ ಪ್ರೊಪ್ರೈಟರ್ ಯಾರು?

ಶ್ರೀ ಎಚ್.ಎಂ. ಚನ್ನಬಸಪ್ಪ.—ಗೊತ್ತಿಲ್ಲ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ದೇವರಾಜ್ ಎಂಬವರಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗೊತ್ತಿಲ್ಲವೆಂದು ಹೇಳಿದಮೇಲೆ ಆ ಮಾತನ್ನು ತಾವು ಅಂಗೀಕಾರ ಮಾಡಬೇಕು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ತಾವು ಏಜೆನ್ಸಿ ಕೊಡುವಾಗ ಕಮ್ಯೂನಿಟಿವಾರಾಗಿ ಕೊಡುತ್ತೀರೋ, ಅಥವಾ Influence ವಾರಾಗಿ ಕೊಡುತ್ತೀರೋ? ಅಥವಾ ಕಮಿಷ್ಷವಾರಾಗಿ ಕೊಡುತ್ತೀರೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಏಜೆನ್ಸಿಕೊಡುವುದು ಕಮ್ಯೂನಿಟಿಮೇಲೆಯೂ ಅಲ್ಲ, influence ಮೇಲೆಯೂ ಅಲ್ಲ. ಒಬ್ಬೊಬ್ಬರ ಅರ್ಜಿಯನ್ನು ಪರೀಕ್ಷೆಮಾಡಿ, ಯಾರು ನಮ್ಮ ಕೆಲಸವನ್ನು ಮಾಡುವುದಕ್ಕೆ ಲಾಯಕ್ಕಾಗಿದ್ದಾರೆಂದು ನೋಡಿ equity ಮತ್ತು justice ನ್ನೂ ಗಮನದಲ್ಲಿಟ್ಟು ಕೊಡುತ್ತೇವೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಹಾಗಾದರೆ ಯಾರು ಯಾರು ಯಾವ ಯಾವ ಪ್ರದೇಶಕ್ಕೆ ಹಾಕಿದ್ದಾರೋ ಅವರಿಗೆ ಆಯಾ ಪ್ರದೇಶಕ್ಕೆ ಕೊಡದೆ ತಾವು ಬೇರೆ ಬೇರೆ ಪ್ರದೇಶಗಳಿಗೆ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು, ಬೇರೆ ಪ್ರದೇಶಗಳಿಗೆ ಕೊಟ್ಟಿದ್ದೇವೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಅದನ್ನು ಹೇಗೆ ಮಾಡಿದಿರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊದಲು ಐದು ಜನಕ್ಕೆ 5 ಭಾಗಕ್ಕೆ ಕೊಟ್ಟಿದ್ದೆವು. ಅದರಮೇಲೆ ಮೈಸೂರು ಸಂಸ್ಥಾನದವರಿಗೆ ಕೊಡಬೇಕೆಂದು ಒತ್ತಾಯ ಬಂದಿದ್ದರಿಂದ ಮತ್ತು ಹೆಚ್ಚುಜನರಿಗೆ ಅವಕಾಶ ಮಾಡಿಕೊಡಬೇಕೆಂದು ಮಾಡಿ, 5 ಭಾಗವನ್ನು 12 ಭಾಗವಾಗಿ ವಿಂಗಡಿಸಿ ಹಂಚಿಕೆ ಮಾಡಿದೆವು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಕಡಿಮೆ ಕಮಿಷನ್ನಿಗೆ ಕೆಲಸ ಮಾಡುತ್ತೇವೆಂಬುದೇ ಪ್ರಾಧಾನ್ಯವಲ್ಲ, ಇನ್ನೂ ಅನೇಕ ಅಂಶಗಳನ್ನು ಪರಿಗಣನೆ ಮಾಡಿ ಮಾಡುತ್ತೇವೆಂದು ಹೇಳಿದಿರಿ.ಅಂಥ ಇತರ ಅಂಶಗಳು ಯಾವುವು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರವರ Business tactics, ಅವರ ಹಣಕಾಸಿನ ಭದ್ರತೆ, ಅವರು ಹಿಂದೆ ಮಾಡುತ್ತಿದ್ದ Business ಏನು, ಈ ಉದ್ಯಮದಲ್ಲಿ ಅವರಿಗೆ ತರಪೇತು ಯಿದೆಯೆ ಮತ್ತು ಅವರಿಗೆ Reputation ಹೇಗಿದೆ ಎಂಬುದನ್ನು ನೋಡಬೇಕು.

ಶ್ರೀ ಎಂ. ವಿ. ನರಸಿಂಹರೆಡ್ಡಿ.—ಈಗ ಮಂಜೂರು ಮಾಡುವುದರಲ್ಲಿ ಈ ಎಲ್ಲಾ ಪರಿಶ್ರಮಗಳೂ ಇವೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದ್ದದ್ದರಲ್ಲೇ ಉತ್ತಮವಾದ ಶ್ರೇಷ್ಠತಮವಾದ qualification ಇದ್ದವರನ್ನು select ಮಾಡಿದ್ದೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಮೊದಲು ಅವರುಗಳು ಕೊಟ್ಟಿದ್ದ ಟೆಂಡರನ್ನು ಕ್ರಮವಾಗಿರಲಿಲ್ಲವೆಂದು ಹೇಳಿ ವಜಾಮಾಡಿ ಆ ಮೇಲೆ ಅರ್ಜಿಗಳನ್ನು ತರಿಸಿದೆವೆಂದು ಹೇಳಿದ್ದೀರಿ. ಟೆಂಡರುಗಳನ್ನೇ ಮತ್ತೆ ಕರೆಯಬೇಕೆಂದು ಕಾನೂನಿನಲ್ಲಿ ವಿಧಾಯಕವಾಗಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಟೆಂಡರು ಮೂಲಕ ವಿಲೇವಾರುವುದು ಒಂದು ರೀತಿ, negotiations ಮೂಲಕ ವಿಲೇವಾರುವುದು ಇನ್ನೊಂದು ರೀತಿ, ಅಪ್ಲಿಕೇಷ್ಷ ಮೂಲಕ ವಿಲೇ ಮಾಡುವುದು ಮತ್ತೊಂದು ರೀತಿ, ಈ ಮೂರು ನಾಲ್ಕು ವಿಧಾನಗಳಲ್ಲೂ ಒಂದೊಂದರಲ್ಲೂ ಒಂದೊಂದು ಅನುಕೂಲವಿದೆ. ಒಟ್ಟಿನಲ್ಲಿ Balance of Advantage ನೋಡಿಕೊಂಡು ನಾವು ಕೊಡಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹೀಗೆ ಮಂತ್ರಿಗಳು ವೈಯಕ್ತಿಕವಾಗಿ ಅರ್ಜಿಗಳನ್ನು ಬರೆದು ಮಂತ್ರಿಗಳೇ ಜಡ್ಜಿಗಳಾಗಿ ಕುಳಿತುಕೊಂಡು ಇವುಗಳನ್ನು ವಿಲೇ ಮಾಡಿದ್ದರಿಂದಲೇ ಅಲ್ಲವೇ ಇಂಥ ಅಪಾದನೆಗಳು ಬಂದಿರುವುದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಂತ್ರಿಗಳೇ ನೇರವಾಗಿ ಮಾಡಿಲ್ಲ. ಆ ಕೈಗಾರಿಕೆಗಸಂಬಂಧಪಟ್ಟಂತೆ Board of management ಎಂಬ ಸಂಸ್ಥೆಯಿದೆ. ಆ ಸಂಸ್ಥೆಯು ಪರಿಶೀಲನೆ ಮಾಡಿ, ಅವರು ಶಿಫಾರಸು ಮಾಡಿದಮೇಲೆ ಮಾಡಿದ್ದೇವೆ. ಅದು ಖಾನಗಿ ಜನರಿಂದ ಕೂಡಿರುವುದಲ್ಲವೆ ?

ಶ್ರೀ ಎ. ವಿ. ನರಸಿಂಹರೆಡ್ಡಿ.—ತಾವಿಲ್ಲಿ ಬೆಂಗಳೂರು ಸಿಟಿಯವರಿಗೆ ಮಾತ್ರ ಈ ಏಜೆನ್ಸಿಗಳನ್ನು ಕೊಟ್ಟಿರುವುದಾಗಿ ಕಂಡುಬರುತ್ತದೆ. ಗ್ರಾಮಾಂತರ ಪ್ರದೇಶಗಳಿಂದ ಮುಂದೆ ಯಾರೂ ಬಂದಿರಲಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇವುಗಳನ್ನು Regional Basis ಮೇಲೆ ವಿಲೇ ಮಾಡುವುದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಗ್ರಾಮಾಂತರ ಪ್ರದೇಶಗಳಿಂದ ಅರ್ಜಿಗಳು ಬಂದಿರಲಿಲ್ಲವೇ? ಎಂಬುದು ನನ್ನ ಪ್ರಶ್ನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಂದಿರಬಹುದು, ಇಲ್ಲದಿದ್ದರೂ ಇರಬಹುದು.

ಶ್ರೀ ಬಿ. ಹುಚ್ಚೇಗೌಡ.—ಯಾವ ಪ್ರದೇಶದಿಂದ ಅರ್ಜಿಗಳು ಬಂದಿದ್ದವೋ ಆ ಪ್ರದೇಶಗಳನ್ನು ಬಿಟ್ಟು ಬೇರೆ ಪ್ರದೇಶಗಳಿಗೆ ಅವಕಾಶ ಕೊಟ್ಟಿರುವಾಗ ಮೊದಲಿನ ಪ್ರದೇಶದ ಏಜೆನ್ಸಿಯನ್ನು ಭರ್ತಿಮಾಡಿದ್ದಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲಯೇ ಹೇಳಿದೆ ಮೈಸೂರು ಸೌತ್ ಮತ್ತು ಬೊಂಬಾಯಿ ನಾರ್ತ್ ಪ್ರದೇಶಗಳಿಗೆ ಇನ್ನೂ ಕೊಟ್ಟಿಲ್ಲ ಎಂದು.

ಶ್ರೀ ಬಿ. ಹುಚ್ಚೇಗೌಡ.—ಹೊಸದಾಗಿ ಅಪ್ಲಿಕೇಷನ್ನೂ ತೆಗೆದುಕೊಳ್ಳದೆ, ಅಪ್ಲಿಕೇಷನ್ ಕೊಟ್ಟಿದ್ದ ಪ್ರದೇಶವನ್ನೂ ಖಾಲಿ ಬಿಟ್ಟುಕೊಂಡು ಇನ್ನೊಂದು ಪ್ರದೇಶಕ್ಕೆ ಏಜೆನ್ಸಿ ಕೊಡುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಪ್ಲಿಕೇಷನ್ ಕೊಟ್ಟಿದ್ದ ಪ್ರದೇಶಕ್ಕೂ ಕೊಟ್ಟಿದ್ದೆವು. ಅವರು ತೆಗೆದುಕೊಂಡಿಲ್ಲ ಅಷ್ಟೆ. ಅಲ್ಲದೆ, ಆಯಾ ಪ್ರದೇಶಗಳನ್ನು ಭರ್ತಿಮಾಡುವಾಗ ಹಿಂದೆ ಯಾರು ಯಾರು ಅರ್ಜಿಕೊಟ್ಟಿದ್ದರೆಂಬುದನ್ನು ನೋಡಿಕೊಂಡು ಭರ್ತಿ ಮಾಡಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಇಷ್ಟೆಲ್ಲಾ ರಗಳೆ ಬರುವಾಗ ಏಕೆ.....

ಶ್ರೀ ಎಚ್. ಎಂ. ಚನ್ನಬಸಪ್ಪ.—ರಗಳೆಯೇನೂ ಬಂದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಎರಡು ವರ್ಷಗಳ ಕಾಲ ಏಕೆ ಹೀಗೆ ಮುಂದಕ್ಕೆ ಹಾಕಿಕೊಂಡು ಬಂದಿದ್ದೀರಿ ? ವಾಸ್ತವವಾಗಿ ನಮ್ಮ ಸೋಪಿನ ವಿಷಯದಲ್ಲಿ ಏಜೆನ್ಸಿ ಕೊಡುವ ಅವಶ್ಯಕತೆಯಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದವರೇ ನೇರವಾಗಿ ತಮ್ಮ ನೌಕರರನ್ನೇ ಇಟ್ಟುಕೊಂಡು ಮಾಲು ವಿಲೇವಾರಿ ಮಾಡುವುದು ಒಂದು ವಿಧಾನ, ಇನ್ನೊಂದು ವಿಧಾನ ಒಬ್ಬರಿಗೆ ಏಜೆನ್ಸಿ ಕೊಟ್ಟು ಅವರಿಗೊಂದು ಶೇಕಡಾವಾರು ಕಮಿಷನ್ ಕೊಟ್ಟು ಮಾಡುವುದು. ಈ ಎರಡು ವಿಧಾನಗಳಲ್ಲಿ ಏಜೆನ್ಸಿ ಮೂಲಕವೇ ವಿಲೇ ಮಾಡುವುದು ಉತ್ತಮವೆಂದು ಒಂದು ತೀರ್ಮಾನಕ್ಕೆ ಬಂದು ಮಾಡಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದಮೇಲೆ ಕಡಮೆ ಕಮಿಷನ್ ಮೇಲೆ ಮಾಡುವುದಾಗಿ ಮುಂದೆ ಬಂದಿರುವವರಿಗೇಕೆ ಕೊಡಕೂಡದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆದರೂ ಅವರಿಗೆ ಯೋಗ್ಯತೆಯಿಲ್ಲದಿರಬಹುದು.

Indigenous products.

Q.—514. **R. K. PRASAD** (Bangarpet).—

Will the Government be pleased to state :—

(*a*) the policy of the Government with regard to the indigenous products;

(*b*) whether any circular has been received by the Government of India over this question ; if so, whether they will place the same on the Table of the House ?

A.— **Sri H. M. CHANNABASAPPA** (Minister for Industries).—

(*a*) *Vide* Government Order No. C. & D. 1855-1955/R.C.I. 36-53-2, dated 8/18th September 1953 in Appendix.

(*b*) This Government have no information.